e ಜೀವನ

# ಅಂತರ್ಜಾಲ ದೂರಸಂಪರ್ಕ ಕಾನೂನು

**ಕ್ಯಾ**ಲಿಫೋರ್ನಿಯಾದಲ್ಲಿರುವ ನಿಮ್ಮ ಸ್ನೇಹಿತನೊಂದಿಗೆ ಮಾತನಾಡಲು ಇನ್ನು ಮುಂದೆ ನೀವು ಅಂತರರಾಷ್ಟ್ರೀಯ ದೂರವಾಣಿ ಕರೆ(ಐಎಸ್‌ಡಿ)ಗೆ ಮೊರೆ ಹೋಗುವ ಅಗತ್ಯವಿಲ್ಲ. ನೀವು ಮಾಡಬೇಕಾದುದಿಷ್ಟೆ. ನಿಮ್ಮ ಪಿಸಿಯ ಮೂಲಕ ಇಂಟರ್‌ನೆಟ್ ಸಂಪರ್ಕ ಕಲ್ಪಿಸಿ, ಎಂಎಸ್‌ಎನ್ ಮೆಸೆಂಜರ್ ಅಥವಾ ಯಾಹೂ ಮೆಸೆಂಜರ್ ಅನ್ವಯಗಳನ್ನು ಉಪಯೋಗಿಸಿ 'ವಾಯ್ಸ್ ಚಾಟ್' ಕ್ರಿಯೆಯನ್ನು ಚಾಲನೆಗೊಳಿಸಿದರಾಯಿತು. ಇಂಟರ್‌ನೆಟ್ ದರದಲ್ಲಿ ಅಮೆರಿಕದ ನಿಮ್ಮ ಸ್ನೇಹಿತನೊಂದಿಗೆ ಅಷ್ಟೇ ಸಲೀಸಾಗಿ ಮಾತನಾಡಬಹುದು. ಈ ರೀತಿಯ ಇಂಟರ್‌ನೆಟ್ ದೂರವಾಣಿ ಸಂಭಾಷಣೆ ಮಾಡುವವರ ಸಂಖ್ಯೆ ಕ್ರಮೇಣ ಹೆಚ್ಚುತ್ತಿದೆ. ಈ ರೀತಿ ಸಂಭಾಷಿಸುವುದು ಇತ್ತೀಚಿನವರೆಗೂ ಕಾನೂನುಬಾಹಿರವಾಗಿತ್ತು. ಆದರೆ ಭಾರತ ಸರ್ಕಾರವು ಅಂತರ್ಜಾಲ ದೂರವಾಣಿ (ಇಂಟರ್‌ನೆಟ್ ಟೆಲಿಫೋನಿ)ಗೆ ಈಗ ಕಾನೂನು ಮನ್ನಣೆ ನೀಡಿದೆ.

ಆದರೆ, ಈ ಹೊಸ ಕಾನೂನು ಅಂತರ್ಜಾಲ ದೂರವಾಣಿ ಬಳಕೆಯನ್ನು ಸುಲಭೀಕರಿಸುವ ಬದಲು ಇನ್ನಷ್ಟು ಕ್ಲಿಷ್ಟಗೊಳಿಸಿದೆ. 'ಗಣಕದಿಂದ ದೂರವಾಣಿ'ಯ ಬಳಕೆ ಇಂದು ವ್ಯಾಪಕವಾಗಿ ಹರಡುತ್ತಿದೆ. ಈ ಮಾರುಕಟ್ಟೆ ಇಂದು ತಿಂಗಳಿಗೆ 280 ಮಿಲಿಯ ನಿಮಿಷಗಳಷ್ಟಿದ್ದು ಶೇ. 120ರಷ್ಟು ವಾರ್ಷಿಕ ಬೆಳವಣಿಗೆ ಕಾಣುತ್ತಿದೆ. ಇದರಲ್ಲಿ ಭಾರತದ ಪಾಲು ಅತ್ಯಲ್ಪ.

ಹೊಸ ಅಂತರ್ಜಾಲ ದೂರವಾಣಿ ಕಾನೂನು ಈ ಪರಿಸ್ಥಿತಿಯನ್ನು ಬದಲಿಸುವುದೆಂದು ನಂಬಲಾಗಿತ್ತು. 2004ರ ಹೊತ್ತಿಗೆ ಅಂತರ್ಜಾಲ ದೂರವಾಣಿ ಕ್ಷೇತ್ರದಲ್ಲಿ ವಿಶ್ವದ ನಾಲ್ಕು ರಾಷ್ಟ್ರಗಳ ಪೈಕಿ ಭಾರತ ಒಂದಾಗುವುದೆಂದು ನಿರೀಕ್ಷಿಸಲಾಗಿತ್ತು. ಆದರೆ ಅದು ಕೇವಲ ದೂರದ ಕನಸಾಗುವುದು ಖಂಡಿತ.

ಈ ಹೊಸ ಕಾನೂನಿನ ಮುಖ್ಯಾಂಶಗಳನ್ನು ಗಮನಿಸಿ:

- ಅಂತರ್ಜಾಲ ದೂರವಾಣಿ ಸೌಲಭ್ಯವನ್ನು ಕೇವಲ ಅಂತರ್ಜಾಲ ಸೇವಾ ಕಂಪನಿಗಳು (ISPs) ಮಾತ್ರ ನೀಡಲು ಸಾಧ್ಯ. ಅದೂ ಅವರವರ ಸೇವಾ ವ್ಯಾಪ್ತಿಗಳಲ್ಲಿ ಮಾತ್ರ. ಇದರಿಂದ ಅಂತರ್ಜಾಲ ದೂರವಾಣಿ ಸೌಲಭ್ಯವನ್ನು ನೀಡಬಹುದಾದವರ ಸಂಖ್ಯೆ ಹತ್ತರಷ್ಟು ಮಾತ್ರ ಸೀಮಿತವಾಗುತ್ತದೆ. ಇದು ಅಂತರ್ಜಾಲ ದೂರವಾಣಿಯ ವ್ಯಾಪಕ ಬೆಳವಣಿಗೆಗೆ ಅತಿ ದೊಡ್ಡ ಅಡಚಣೆಯಾಗಲಿದೆ.

  ಇದರಿಂದ ಇಂಟರ್‌ನೆಟ್ ಟೆಲಿಫೋನಿಯನ್ನು ಬಳಸುವವರ ಸಂಖ್ಯೆಯೇನೂ ಕಡಿಮೆಯಾಗುವುದಿಲ್ಲ. ಇಂದು ಮೈಕ್ರೋಸಾಫ್ಟ್ ಸಂಸ್ಥೆ ತನ್ನ ವಿಂಡೋಸ್ ಎಕ್ಸ್‌ಪಿ ಆಪರೇಟಿಂಗ್ ಸಿಸ್ಟಮ್‌ನೊಂದಿಗೆ ಎಂಎಸ್‌ಎನ್ ಮೆಸೆಂಜರನ್ನು ಉಚಿತವಾಗಿ ನೀಡುತ್ತಿದೆ. ಇದರ ಮೂಲಕ ಅಂತರ್ಜಾಲ ದೂರವಾಣಿಯನ್ನು ಉಪಯೋಗಿಸಬಹುದಾಗಿದೆ.

- ಈ ಕಾನೂನಿನ ಇನ್ನೊಂದು ವಿಶೇಷವೆಂದರೆ ಏಪ್ರಿಲ್ 1, 2002ರಿಂದ ಒಂದು ಪಿಸಿಯಿಂದ ಇನ್ನೊಂದು ಪಿಸಿಗೆ ಕರೆ ಮಾಡಬಹುದಾಗಿದೆ. ಹಾಗೆಯೇ ಭಾರತದಿಂದ ಪಿಸಿಯ ಮೂಲಕ ಯಾವುದೇ ವಿದೇಶೀ ದೂರವಾಣಿ ಸಂಖ್ಯೆಗೆ ಕರೆ ಮಾಡಬಹುದಾಗಿದೆ. ಆದರೆ, ಅದೇ ಭಾರತದೊಳಗಿನ ಯಾವುದೇ ದೂರವಾಣಿಗೆ ಈ ಮೂಲಕ ಕರೆ ನೀಡುವಂತಿಲ್ಲ ಮತ್ತು ವಿದೇಶದಲ್ಲಿ ಯಾವುದೇ ಪಿಸಿ ಬಳಕೆದಾರ ಭಾರತದಲ್ಲಿನ ದೂರವಾಣಿಗೆ ಕರೆ ನೀಡುವಂತಿಲ್ಲ. ಭಾರತದಲ್ಲಿರುವ ಪಿಸಿ ಸಂದಣಿಯನ್ನು ಗಮನಿಸಿದರೆ, ಈ ಹೊಸ ಕಾನೂನು ಎಷ್ಟರಮಟ್ಟಿಗೆ ಫಲಕಾರಿಯಾಗಲಿದೆ ಎಂದು ನಮಗೇ ತಿಳಿಯುತ್ತದೆ.

ಭಾರತೀಯ ದೂರಸಂಪರ್ಕ ಸಂಸ್ಥೆಗಳಾದ MTNL, BSNLಗಳ ಕೋರಿಕೆಯ ಮೇರೆಗೆ ಈ ಕಾನೂನನ್ನು ಜಾರಿಗೆ ತರಲಾಗಿದೆಯೆಂದು ತೋರುತ್ತದೆ. ಮೈಕ್ರೋಸಾಫ್ಟ್ ವಿಂಡೋಸ್ ಎಕ್ಸ್‌ಪಿಯೊಂದಿಗೆ ದೊರೆಯುವ ಎಂಎಸ್‌ಎನ್ ಮೆಸೆಂಜರನ್ನು ತೆಗೆಯಲು ಈ ಕಾನೂನಿನಿಂದ ಸಾಧ್ಯವೇ? ಅಥವಾ ರೂ.50 ದಂಡ ತೆತ್ತು ಕಾನೂನುಬಾಹಿರವಾಗಿ ಇಂಟರ್‌ನೆಟ್ ಟೆಲಿಫೋನಿಯನ್ನು ಬಳಸುವವರ ಸಂಖ್ಯೆಯನ್ನು ಇಳಿಸಲು ಸಾಧ್ಯವೇ?

ಕಾನೂನು ತಯಾರಕರು ಇಲ್ಲಿ ಗಮನಿಸಬೇಕಾದ ಮುಖ್ಯವಾದ ಅಂಶವೆಂದರೆ, ಯಾವುದೇ ಅಡೆತಡೆಯಿಲ್ಲದೆ ಅಂತರ್ಜಾಲ ದೂರಸಂಪರ್ಕದ ಬೆಳವಣಿಗೆ ಅಹೋರಾತ್ರಿ ಹೆಚ್ಚುವುದಿಲ್ಲ. ಇಂಟರ್‌ನೆಟ್ ಟೆಲಿಫೋನಿಯ ಪ್ರಗತಿ ಅಂತರ್ಜಾಲ ಸಂಪರ್ಕದ ವೇಗದ ಮೇಲೆ ಅವಲಂಬಿತವಾಗಿದೆ.

ಇಂದು ಕ್ಯಾಲಿಫೋರ್ನಿಯಾದಲ್ಲಿರುವ ನಿಮ್ಮ ಸ್ನೇಹಿತನೊಂದಿಗೆ ಮಾತನಾಡಲು ಇಂಟರ್‌ನೆಟ್ ಅವಕಾಶ ನೀಡಬಹುದು. ಆದರೆ ವ್ಯಾಪಾರ ಸಂಬಂಧವಾಗಿ ಇದನ್ನು ಬಳಸುವುದು ಇನ್ನೂ ಸಾಧ್ಯವಿಲ್ಲ. ಅಂತರ್ಜಾಲ ದೂರಸಂಪರ್ಕದ ಅಡೆತಡೆಗಳನ್ನು ನಿರ್ಮೂಲನಗೊಳಿಸಿದಲ್ಲಿ ನಮ್ಮ ದೇಶದ ದೂರಸಂಪರ್ಕ ವ್ಯವಸ್ಥೆ ಖಂಡಿತ ಹೆಚ್ಚು ಪರಿಣಾಮಕಾರಿಯಾಗುವುದರಲ್ಲಿ ಸಂಶಯವಿಲ್ಲ.

ಜಿ.ಪಿ. ವಿನಯಬಾಬು